**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ**

ಸಿಸಿ ನಂ. 970/14

| | | |
|---|---|---|
| ಸಾಕ್ಷಿಯ ಹೆಸರು | ಸರೋಜ ಬಾಯಿ | ಪಿ.ಡಬ್ಲ್ಯು-4 |
| ಗಂಡನ ಹೆಸರು | ಕೆ.ಎಂ.ಪ್ರಕಾಶ್ | ಸಿ.ಡಬ್ಲ್ಯು-7 |
| ವಯಸ್ಸು | **55** ವರ್ಷ | |
| ಉದ್ಯೋಗ | ಪಿಎಸ್ಐ | ದಿನಾಂಕಃ 23-12-2022. |
| ವಾಸ | ಚನ್ನರಾಯಪಟ್ಟಣ | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ನಾನು ದಿಃ11-02-2011 ರಿಂದ 15-07-2015 ರವರೆಗೆ ಎ.ಎಸ್.ಐ.ಆಗಿ ಆಲೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರು ತ್ತೇನೆ.

ದಿಃ 22-08-2014 ರಂದು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 3-15 ಕ್ಕೆ ನಮ್ಮ ಠಾಣೆಯ ಪೋಲೀಸ್ ಇನ್ಸ್‌ಪೆಕ್ಟರ್ ಚಾಸಾ-1 ರವರು ಕುಂಬಾರಹಳ್ಳಿಯಲ್ಲಿ ದಾಳಿ ಮಾಡಿಕೊಂಡು ಬಂದಿದ್ದು , ವರದಿಯನ್ನು ನೀಡಿದ್ದು , ವರದಿಯನ್ನು ಪಡೆದು ಠಾ ಮೊ 287/14 ರಂತೆ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರ ರೀತ್ಯಾ ಪ್ರಕರಣ ದಾಖಲಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ವರದಿಯನ್ನು ನಿಪಿ-1 ಎಂದು , ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ. ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಪ್ರ.ವ. ವರದಿಯನ್ನು ನಿಪಿ-2 ಎಂದು , ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ವರದಿಯೊಂದಿಗೆ ವಶಪಡಿಸಿಕೊಂಡಂತಹ ಮುದ್ದೆಮಾಲುಗಳನ್ನು ಮತ್ತು ಆರೋಪಿಯನ್ನು ಸಹ ಹಾಜರುಪಡಿಸಿರುತ್ತಾರೆ. ವಶಪಡಿಸಿಕೊಂಡಂತಹ ವಸ್ತುಗಳನ್ನು ಪರಿಶೀಲಿಸಲಾಗಿ , 180 ಎಂ ಎಲ್. ನ ಡೀಲಕ್ಸ್ ವಿಸ್ಕಿ ಯ 20 ಟೆಟ್ರಾ ಪ್ಯಾಕೆಟ್ , 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಟೆಟ್ಟಾ ಪ್ಯಾಕೆಟ್ , ಗಳು ಸದರಿ ಮುದ್ದೆಮಾಲುಗಳಲ್ಲಿ ಎರಡರಿಂದ

ಒಂದೊಂದದನ್ನು ಪ್ರತ್ಯೇಕವಾಗಿ ತೆಗೆದು, ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಹರಗಿನಿಂದ ಹೊಲಿದಿದ್ದು , ಜೊತೆಗೆ ಒಂದು ಓಂ ಬ್ರಾಂಡ್ ಎಂದು ನಮೂದಿಸಿರುವ ಅಕ್ಕಿ ಚೀಲವನ್ನು ಸಹ ಹಾಜರುಪಡಿಸಿದ್ದು , ಈ 5 ವಸ್ತುಗಳನ್ನು ಸ್ವತ್ತುಪಟ್ಟಿ ಸಂಖ್ಯೆ 237/2014 ರಲ್ಲಿ ನಮೂದಿಸಿ , ಎಫ್.ಎಸ್.ಎಲ್ ಗೆ ಪರೀಕ್ಷೆಗಾಗಿ ಸಲ್ಲಿಸಲು ನ್ಯಾಯಾಲಯದ ಅನುಮತಿಯನ್ನು ಪಡೆದಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು , ಆ ಸಮಯದಲ್ಲಿ ತಾಂತ್ರಿಕ ದೋಷದಿಂದ ಕಂಪ್ಯೂಟರ್ ನಲ್ಲಿ ಹೇಳಿಕೆ ಮಾಡಿಕೊಂಡಿದ್ದು , ಪಿ.ಐ ಸತೀಶ್ ಡಿ. ಎಂದು ನಮೂದಾಗಿದ್ದು, ಮತ್ತು 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು 30 ರ ಬದಲು 16 ಎಂದು ತಾಂತ್ರಿಕ ದೋಷದಿಂದ ನಮೂದಾಗಿದ್ದು , ಅದನ್ನು ಸರಿಪಡಿಸಲು ಈ ಮೂಲಕ ಕೋರಲಾಗಿದೆ. ಹಾಜರುಪಡಿಸಿದಂತಹ ಆರೋಪಿಗೆ ದಸ್ತಗಿರಿ ನೋಟೀಸನ್ನು ಜಾರಿ ಮಾಡಿ , ಸರ್ವೋಚ್ಚ ನ್ಯಾಯಾಲಯದ 11 ಸೂತ್ರಗಳನ್ನು ಪಾಲಿಸಿ , ಆರೋಪಿಯನ್ನು ಹೆಚ್ ಸಿ -110 ರವರೊಡನೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು , ಸದರಿ ಮುದ್ದೆಮಾಲುಗಳನ್ನು ಈಗಾಗಲೇ ಮು ಮಾ -1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ಶ್ರೀ. ಬಿ.ಎಂ.ಜಿ. ವಕೀಲರಿಂದಃ

ವರದಿಯ ಜೊತೆ ನಾನು ಮಹಜರ್ ನೀಡಿರುವುದಿಲ್ಲ. ಮುದ್ದೆಮಾಲಿಗೂ , ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಕೋರಿಕೆಯ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಬೇರೆ ಪ್ರಕರಣಗಳಿಗೆ ಸಂಬಂಧಿಸಿದ ಸಂಬಂಧಿಸಿದ ಮುದ್ದೆಮಾಲುಗಳನ್ನು ಈ ಪ್ರಕರಣಕ್ಕೆ ಅಳವಡಿಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಮುದ್ದೆಮಾಲುಗಳನ್ನು

ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಸೂಕ್ತ ತನಿಖೆ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ಮಹಜರ್ ಕ್ರಮ ಕೈಗೊಳ್ಳದ ಕಾರಣ ಮಹಜರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬೇರೆ ಪ್ರಕರಣದಲ್ಲಿ ಸಾಕ್ಷಿಯಾಗಿ ಸಹಕರಿಸಿರುವುದಿಲ್ಲ ಎಂಬ ಕಾರಣಕ್ಕೆ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.